# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ಸಭೆಯ ಜನನ

ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಅಳವಡಿಸುವವರು: Ruth Klassen
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ಯೇಸು ಸತ್ತ ನಂತರ ಆತನ ಶಿಷ್ಯರು ಹೇದರಿ ಅಡಗಿಕೊಂಡರು.
ಯೇಸು ಪುನರುತ್ಥಾನವಾದನಂತರ ಶಿಷ್ಯರಿಗೆ ಕಾಣಿಸಿಕೊಂಡರು.
ಯೇಸು ಅವರನ್ನು ಬಿಟ್ಟು ತಾನು ಬಂದ ಸ್ಥಳಕ್ಕೆ ತಿರುಗಿ ಹೋಗಿ
ತಂದೆಯೊಂದಿಗೆ ಇರುವೆನೆಂದು ತಿರ್ಮಾನಿಸಿದನು.



ಯೇಸುವು
ಬಿಟ್ಟು
ಹೋಗುವ
ಮೊದಲು ತನ್ನ
ಹಿಂಬಾಲಕರಿಗೆ
ನಿಮ್ಮನ್ನು ಸಂತೈಸಲು ಮತ್ತು ನಿಮಗೆ
ಸಹಾಯಕನ್ನನ್ನಾಗಿ ಆತ್ಮನನ್ನು ಕಳಿಸುತ್ತೇನೆಂದು
ವಾಗ್ದಾನವನ್ನು ಮಾಡಿದ್ದನು. **(ಯೋಹಾನ. ೧೫:೨೬)** ಯೇಸುವು ಅವರನ್ನು
ಬಿಟ್ಟು ಹೋದ ಕೆಲವು ದಿನಗಳ ನಂತರ ಪವಿತ್ರಾತ್ಮನು ಬಂದನು.

**120** ಜನರು ಕಾಯೂವಾಗ ತಕ್ಷಣವೆ ಅವರಿರುವಂತ ಮನೆಯಲ್ಲಿ ಬಿರುಗಾಳಿ ಬೀಸುತ್ತದೋ ಎಂಬಂತೆ ಪಕ್ಕನೆ ಒಂದು ಶಬ್ದವುಂಟಾಗಿ ಆ ಮನೆಯನ್ನೇಲ್ಲಾ ತುಂಬಿಕೊಂಡಿತು.



ಅಲ್ಲಿರುವ ಎಲ್ಲಾ ಜನರ ಮೇಲೆ ಬೆಂಕಿಯು ಕವಲೊಡೆದಹಾಗೆ ತುಂಬಿಕೊಂಡು ಎಲ್ಲರು ಪವಿತ್ರಾತ್ಮಭರಿತರಾದರು. ಯೇಸು ವಾಗ್ದಾನ ಮಾಡಿದಂತೆ ಆಯಿತು.



ಅವರು ತಾವು ಕಲಿಯದ ಭಾಷೆಯನ್ನು ಮಾತಾಡಲಾರಂಬಿಸಿದರು, ಅದನ್ನು ಕೇಳಿದ ಅಲ್ಲಿ ಬಂದಂತ ಜನರು ಇವರು ನಮ್ಮ ನಮ್ಮ ಹಟ್ಟು ಭಾಷೆಯನ್ನು ಮಾತಡುತ್ತಾರೆಂದು ಅಂದುಕೊಂಡು ಅಲ್ಲಿರುವ ಜನರು ಆಶ್ಚರ್ಯಪಟ್ಟರು ಮತ್ತು 'ಇವರು ದ್ರಾಕ್ಷರಸವನ್ನು ಕುಡಿದಿದ್ದಾರೆಂದು' ಅವರನ್ನು ಪರಿಹಾಸ್ಯ ಮಾಡಿದರು.



ಆಗ ಪೇತ್ರನು ಎದ್ದು ನಿಂತು ಹೇಳಿದ್ದೆನೆಂದರೆ, ನೀವು ಬಾವಿಸಿದಂತೆ ಇವರು ಅಮಲೇರಿದವರಲ್ಲ, ಪ್ರವಾದಿಯಾದ ಯೋವಲನ ಗ್ರಂಥದಲ್ಲಿ ದೇವರು ವಾಗ್ದಾನ ಮಾಡಿದ ಹಾಗೆ ಪವಿತ್ರಾತ್ಮನು ಬಂದು ಎಲ್ಲರಿಗೂ ಸಹಾಯ ಮತ್ತು ಆಶೀರ್ವಾದ ಮಾಡುವವನೆಂದು ಹೇಳಲ್ಪಟ್ಟಿದೆ. ಎಂಬುದಾಗಿ ಅವರಿಗೆ ಜ್ಞಾಪಿಸಿದನು.



ಆಗ ಪೇತ್ರನು ಮತ್ತು ಹನ್ನೊಂದು ಮಂದಿ ಅಪೋಸ್ತಲರ ಸಹಿತವಾಗಿ ಎದ್ದು ನಿಂತು ಹೇಳಿದ್ದೆನೆಂದರೆ ನೀವು ನಿಮ್ಮ ನಿಮ್ಮ ಪಾಪಗಳಿಂದ ಮನ:ತಿರುಗಿ ಪಶ್ಚತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ಥಾನ ತಗೆದುಕೊಳ್ಳಿರಿ, ಆಗ ಪವಿತ್ರಾತ್ಮ ದಾನವನ್ನು ಹೊಂದಿಕೊಳ್ಳವಿರಿ.




ಆತನ ಮಾತಿಗೆ ವಿದೇಯರಾದವರು 3000 ಜನರು ಮತ್ತು ಹಾಗೆಯೇ ಹೆಚ್ಚು ಹೆಚ್ಚು ಜನರು ಆ ಸಭೆಗೆ ಸೇರುತ್ತ ಬಂದರು. ಪವಿತ್ರಾತ್ಮನು ಬಂದ ದಿನದಿಂದ ಸಭೆಯು ಪ್ರಾರಂಭವಾಯಿತು.

ಯೇಸುವನ್ನು ನಂಬಿದ ದೇವ ಜನರೆಲ್ಲರ ಮೇಲೆ ಪವಿತ್ರಾತ್ಮನ ಶಕ್ತಿಯು ಬಂತು. ಒಂದು ದಿನ ಪೇತ್ರನು ಮತ್ತು ಯೋಹಾನನು ಮೂರು ಘಂಟೆಯ ಸಮಯಕ್ಕೆ ನಡೆಯುವ ಪ್ರಾರ್ಥನೆಗೆ ಹೋಗುವಾಗ ದೇವಾಲಯದ ಬಾಗಿಲಲ್ಲಿ ಒಬ್ಬ ಕುಂಟ ಭಿಕ್ಷುಕಗಾರನಿದ್ದನು, ಅವನು ಪೇತ್ರ, ಯೋಹಾನರ ಹತ್ತಿರ ಭಿಕ್ಷವನ್ನು ಕೇಳಿದನು.





ಪೇತ್ರ, ಯೋಹಾನರು
‘ನಮ್ಮಲ್ಲಿ ಬೆಳ್ಳಿ ಬಂಗಾರವಂತು
ಇಲ್ಲಾ ನಮ್ಮಲ್ಲಿರುವಂತದನ್ನು
ಕೊಡುತ್ತವೆಂದು ಹೇಳಿ ನಜರೇತಿನ
ಯೇಸುವಿನ ನಾಮದಲ್ಲಿ ಎದ್ದು
ನಡೆದಾಡು’ ಎಂದು ಹೇಳಿ ಆತನ
ಕೈಯನ್ನು ಹಿಡಿದು ಮೇಲಕ್ಕತ್ತಿದರು,
ಕೂಡಲೆ ಅವನ ಕೈ ಕಾಲುಗಳಿಗೆ
ಬಲ ಬಂದು ಹಾರುತ್ತ
ಕುಣಿಯೂತ್ತ ದೇವರನ್ನು
ಸ್ತುತಿಸುತ್ತ ದೇವಾಯಳದೋಳಕ್ಕೆ
ಹೋದನು.

ಅದನ್ನು ನೋಡಿದ ಜನರು ಆಶ್ಚರ್ಯ ಪಟ್ಟರು, ಆಗ ಪೇತ್ರನು ಇವನು ಗುಣವಾಗುವುದಕ್ಕೆ ಇದು ದೇವರ ಶಕಿಯೇ ಹೊರತು ನಮ್ಮ ಶಕ್ತಿಯಲ್ಲ ಎಂದು ಸಾರಿ ಹೇಳಿದನು. ಮತ್ತು ಯೇಸುವನ್ನು ದೇವರು ಸಾವಿನಿಂದ ಎಬ್ಬಿಸಿದನು ಎಂದು ಹೇಳಿದಾಗ ಯಹೂದ್ಯ ನಾಯಕರು ಪೇತ್ರ ಯೋಹಾನರ ಮೇಲೆ ಸಿಟ್ಟುಗೊಂಡು ಸರೆಮನೆಯಲ್ಲಿ ಹಾಕಿದರು. ಅಂತಹ ಪರಿಸ್ಥಿತಿಯಲ್ಲಿಯೂ 5000 ಗಂಡಸರು ಯೇಸುವಿನ ಮೇಲೆ ನಂಬಿಕೆಯನ್ನಿಟ್ಟರು.



ಮಾರನೆಯ ದಿನ ಪೇತ್ರ, ಯೋಹಾನರು ದೇವಾಲಯದ ನಾಯಕರ ಮುಂದೆ ನಿಂತರು, ನಾಯಕರು ಅವರಿಗೆ ಕೇಳಿದ್ದನೆಂದರೆ ನೀವು ಯಾವ ಶಕ್ತಿಯಿಂದ ಮತ್ತು ಯಾವ ಅಧಿಕಾರದಿಂದ ಇದನ್ನು ಮಾಡುತ್ತಿರಿ? ಎಂದು ಕೇಳಿದಾಗ, ಆಗ ಪೇತ್ರನು ಧೈರ್ಯವಾಗಿ 'ಶಿಲುಬೆಗೆ ಏರಿಸಲ್ಪಟ್ಟು ಸತ್ತು ಸಾವಿನಿಂದ ಎದ್ದಿರುವಂತ ನಜರೇತಿ ಯೇಸುವಿನ ನಾಮದಲ್ಲಿ' ನಾವು ಇದನ್ನು ಮಾಡುವವರಾಗಿದ್ದೆವೆ ಎಂದು ಅವರಿಗೆ ಉತ್ತರಕೊಟ್ಟನು.





ಪೇತ್ರನು ‘ಧೈರ್ಯವಾಗಿ ಆಕಾಶದ ಕೆಳಗೆ ಮತ್ತು ಮನುಷ್ಯರೊಳಗೆ ಕೊಡಲ್ಪಟ್ಟಿರುವ ಯಾವ ಹೆಸರಿನಿಂದಲೂ ರಕ್ಷಣೆಯಾಗಲಾರದು’ ಎಂದು ಹೇಳಿದನು. ಇದನ್ನು ಕೇಳಿದ ಆ ನಾಯಕರು ಪೇತ್ರ, ಯೋಹಾನರನ್ನು ಹೊಡೆಸಿ ಇನ್ನೂ ಮುಂದೆ ಈ ಹೆಸರನ್ನು ಎತ್ತಿ ಮಾತನಾಡಬಾರದೆಂದು ಗದರಿಸಿ ಎಚ್ಚರಿಸಿದರು.



ಪವಿತ್ರಾತ್ಮನು ಬರುವ ಮೊದಲು ಪೇತ್ರನು ಯೇಸುವಿನ ನಿಮಿತ್ತವಾಗಿ ಭಯಪಡುತ್ತಿದ್ದ, ಆದರೆ ಪವಿತ್ರಾತ್ಮನು ಆತನ ಮೇಲೆ ಬಂದಾಗ, ಆತನನ್ನು ಯಾರು ಭಯಪಡಿಸುವುದಕ್ಕೆ ಯಾರಿಂದಲೂ ಆಗಲಿಲ್ಲ. ಪೇತ್ರ, ಯೋಹಾನರು ಹೇಳಿದ್ದೇನೆಂದರೆ ದೇವರಿಗಿಂತ ಹೆಚ್ಚಾಗಿ ನಿಮ್ಮ ಮಾತನ್ನು ಕೇಳುವುದು ಸರಿಯೇ? ನೀವೇ ತೀರ್ಮಾನಿಸಿರಿ, ನಾವು ಮಾತ್ರ ಕಂಡು ಕೇಳಿದನ್ನು ಹೇಳದೆ ಇರಲಾರೆವು.

ಬಹಳ ಹಿಂಸೆಯ
ನಂತರ ಪೇತ್ರ,
ಯೋಹಾನರನ್ನು
ಸೆರೆಮನೆಯಿಂದ
ಬಿಡುಗಡೆಮಾಡಿದರು.
ಅವರ ಜೊತೆ
ಸರಮನೆಯಲ್ಲಿದ್ದಂತಹ
ಎಲ್ಲರಿಗೂ ಸುವಾರ್ತೆಯನ್ನು
ತಿಳಿಸಿದರು ಮತ್ತು ಅನೇಕ
ರೋಗಿಗಳನ್ನು ಗುಣ ಪಡಿಸಿದರು.
ಅಲ್ಲಿರುವಂತ ಅನೇಕರ ಮೇಲೆ
ಪವಿತ್ರಾತ್ಮನು ಇಳಿದು ಬಂದನು.
ಹೀಗೆ ಸಭೆಯು ಬೆಳೆಯುತ್ತ ಬಂತು.



ಸಭೆಯ ಜನನ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಅಪೊಸ್ತಲ ಕೃತ್ಯ 1–4

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

# ಮುಕ್ತಾಯ

55

60

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16